# ಮೈಸೂರು ವಿಶ್ವವಿದ್ಯಾನಿಲಯ

ದಿನಾಂಕ 11–9–2019ರಂದು ಬೆಳಿಗ್ಗೆ 11.00 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡವಳಿಗಳು.

**ಹಾಜರಿದ್ದ ಸದಸ್ಯರು:**

1. ಪ್ರೊ. ಜಿ. ಹೇಮಂತಕುಮಾರ್ – ಕುಲಪತಿಗಳು ಹಾಗೂ ಅಧ್ಯಕ್ಷರು
2. ಶ್ರೀ. ಸಿ. ಜಯರಾಮ – ಸದಸ್ಯರು
3. ಡಾ. ಕೆ. ಕೆ. ವಿಶಲಾಕ್ಷಿ – ಸದಸ್ಯರು
4. ಶ್ರೀ. ಜಿ. ಅಶ್ವತನಾರಾಯಣ – ಸದಸ್ಯರು
5. ಪ್ರೊ. ಕೆ. ಎಂ. ಮಹದೇವನ್ – ಸದಸ್ಯರು
   ಕುಲಸಚಿವರು (ಪರೀಕ್ಷಾಂಗ)
6. ಪ್ರೊ. ಟಿ. ಎಸ್. ದೇವರಾಜ – ವಿಶೇಷ ಆಹ್ವಾನಿತರು
7. ಪ್ರೊ. ಆರ್. ಶಿವಪ್ಪ – ಕುಲಸಚಿವರು ಹಾಗು ಸದಸ್ಯ ಕಾರ್ಯದರ್ಶಿಗಳು

**ಹಾಜರಾಗದ ಸದಸ್ಯರು:**

8. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
9. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
10. ಪ್ರೊ. ಮಹದೇವ
11. ಕು. ಸಹನಾ ಶಿವಪ್ಪ
12. ಶ್ರೀ. ಕೆ. ಟಿ. ಅಪ್ಪಾಜಪ್ಪ
13. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
14. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
15. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಅಹ್ವಾನಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ನೂತನ ಕುಲಸಚಿವರಾಗಿ ನೇಮಕಗೊಂಡಿರುವ ಪ್ರೊ. ಆರ್. ಶಿವಪ್ಪ, ಪ್ರಾಧ್ಯಾಪಕರು, ಸಮಾಜಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಪರಿಚಯಿಸಿ ಸಭೆಗೆ ಸ್ವಾಗತಿಸಿದರು.

ಹಾಗೂ ಇದುವರೆವಿಗೂ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಪ್ರೊ. ಲಿಂಗರಾಜ ಗಾಂಧಿ, ಇಂಗ್ಲಿಷ್ ವಿಭಾಗ, ಸರ್. ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ನಂತರ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ವಿಶೇಷ ಸಭೆ 2019/9.1 | ದೂರಶಿಕ್ಷಣದಡಿಯಲ್ಲಿ ನೂತನ ಕಲಿಕಾ ಕೇಂದ್ರದ ಸಂಯೋಜನೆಯ ಸ್ಥಳೀಯ ತಪಾಸಣಾ ಸಮಿತಿ 2019-20ರ ವರದಿಯ ಬಗ್ಗೆ. |
| ತೀರ್ಮಾನ | ದೂರಶಿಕ್ಷಣದಡಿಯಲ್ಲಿ ನೂತನ ಕಲಿಕಾ ಕೇಂದ್ರಗಳಿಗೆ ಸಂಯೋಜನೆ ನೀಡುವ ಸಂಬಂಧ ಅರ್ಜಿಯನ್ನು ಸಲ್ಲಿಸಿದ್ದ ಒಟ್ಟು 75 ಕೇಂದ್ರಗಳಲ್ಲಿ, 25 ಕೇಂದ್ರಗಳಿಗೆ ತಪಾಸಣಾ ಸಮಿತಿಯು ಭೇಟಿ ನೀಡಿ ವರದಿಯನ್ನು ಸಲ್ಲಿಸಿರುತ್ತದೆ. ಸದರಿ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದ್ದು 25 ಕಲಿಕಾ ಕೇಂದ್ರಗಳಿಗೆ ಸಂಯೋಜನೆ ನೀಡುವುದಕ್ಕೆ ಸಿಂಡಿಕೇಟ್ ಸಭೆಯು ಅನುಮೋದನೆಯನ್ನು ನೀಡಿತು. |
| ವಿಶೇಷ ಸಭೆ 2019/9.1(a) | ಪ್ರೊ. ಬಿ.ಪಿ. ಮಹೇಶ್ ಚಂದ್ರ ಗುರು, ನಿವೃತ್ತ ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ವಿಶ್ವವಿದ್ಯಾನಿಲಯವು ವಿಧಿಸಿದ್ಧ ದಂಡವನ್ನು ಸರ್ಕಾರವು ರದ್ದುಗೊಳಿಸಿರುವ ಬಗ್ಗೆ. |
| ತೀರ್ಮಾನ | ಪ್ರೊ. ಬಿ.ಪಿ. ಮಹೇಶ್ ಚಂದ್ರ ಗುರು, ನಿವೃತ್ತ ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ವಿಶ್ವವಿದ್ಯಾನಿಲಯವು ವಿಧಿಸಿದ ದಂಡವನ್ನು ಸರ್ಕಾರವು ರದ್ದುಗೊಳಿಸಿರುವ ಆದೇಶದ ಬಗ್ಗೆ ಸಿಂಡಿಕೇಟ್ ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ತೀರ್ಮಾನಿಸಲಾಯಿತು.<br><br>1. ದಿನಾಂಕ 05.02.2007ರ ಸಿಂಡಿಕೇಟ್ ಸಭೆಯಲ್ಲಿ ಇವರಿಗೆ ಮುಂಬರುವ ಎರಡು ವಾರ್ಷಿಕ ಮುಂಬಡ್ತಿಗಳನ್ನು(with cumulative effect) ತಡೆ ಹಿಡಿಯುವಂತೆ ಮತ್ತು ದಿನಾಂಕ 10.09.2005 ರಿಂದ 07.02.2008ರವರೆಗೆ ಇವರ ಅಮಾನತ್ತಿನ ಅವಧಿಯನ್ನು ಅಮಾನತ್ತಿನ ಅವಧಿಯೆಂದು ಪರಿಗಣಿಸುವಂತೆ ತೆಗೆದುಕೊಂಡಿರುವ ತೀರ್ಮಾನವನ್ನು ರದ್ದುಪಡಿಸಿರುವುದರಿಂದ, ಈ ಸಂಬಂಧ ವಿಶ್ವವಿದ್ಯಾನಿಲಯವು ಹೊರಡಿಸಿರುವ ಆದೇಶ ಸಂಖ್ಯೆ ಇಟಿ.7/246/2005-06 ದಿನಾಂಕ 07-12-2007ನ್ನು ಹಿಂಪಡೆಯುವಂತೆ ತೀರ್ಮಾನಿಸಲಾಯಿತು. |

2. ದಿನಾಂಕ 29-08-2013ರ ಸಿಂಡಿಕೇಟ್ ಸಭೆಯಲ್ಲಿ ಇವರಿಗೆ ದಿನಾಂಕ 10-09-2005 ರಿಂದ 07-02-2008 ರವರೆಗೆ ವಿಶ್ವವಿದ್ಯಾನಿಲಯದ ಸೇವೆಯಿಂದ ಅಮಾನತ್ತಿನಲ್ಲಿಟ್ಟಿದ್ದ ಅವಧಿಯನ್ನು ಅಮಾನತ್ತಿನ ಅವಧಿಯೆಂದು ಹಾಗು ಮುಂಬರುವ ಎರಡು ವಾರ್ಷಿಕ ವೇತನ ಬಡ್ತಿಗಳನ್ನು (with cumulative effect) ತಡೆ ಹಿಡಿದು ಇವರ ವೇತನವನ್ನು ನಿಗದಿಪಡಿಸುವಂತೆ ತೆಗೆದುಕೊಂಡಿರುವ ತೀರ್ಮಾನವನ್ನು ರದ್ದುಪಡಿಸಿರುವುದರಿಂದ, ಈ ಸಂಬಂಧ ವಿಶ್ವವಿದ್ಯಾನಿಲಯವು ಹೊರಡಿಸಿರುವ ಆದೇಶ ಸಂಖ್ಯೆ : ಇಟಿ7/246/2005-2006 ದಿನಾಂಕ 11.10.2013ನ್ನು ಹಿಂಪಡೆಯುವಂತೆ ತೀರ್ಮಾನಿಸಲಾಯಿತು.

3. ದಿನಾಂಕ 24-07-2010ರ ವಿ.ವಿ.ನಿಲಯ ಆದೇಶದಲ್ಲಿ ಇವರ ವಿರುದ್ಧದ ಎಲ್ಲಾ ವಿಚಾರಣೆಗಳನ್ನು ಹಿಂತೆಗೆದುಕೊಂಡು ಇವರನ್ನು ಅವರ ಮೂಲ ಹುದ್ದೆಯಾದ ಪ್ರಾಧ್ಯಾಪಕರು, ಸಂಪರ್ಕ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ಸೂಚಿಸಿರುವ ಆದೇಶವನ್ನು ಸರ್ಕಾರವು ಸ್ಥಿರೀಕರಿಸಿರುವ ಅಂಶವನ್ನು ಒಪ್ಪಿತು.

4. ಕ್ರ.ಸಂ. 01 ಮತ್ತು 02ರಲ್ಲಿ ತಿಳಿಸಿರುವ ಆದೇಶಗಳನ್ನು ಸರ್ಕಾರವು ರದ್ದುಪಡಿಸಿರುವುದರಿಂದ ಹಾಗೂ ಕ್ರ.ಸಂ 03ರಲ್ಲಿ ತಿಳಿಸಿರುವ ಆದೇಶವನ್ನು ಸ್ಥಿರೀಕರಿಸಿರುವುದರಿಂದ, ಇವರಿಗೆ ತಡೆಹಿಡಿದಿದ್ದ ಎರಡು ವಾರ್ಷಿಕ ವೇತನ ಬಡ್ತಿ ಮತ್ತು ದಿನಾಂಕ 10.09.2005 ರಿಂದ 07.02.2008ರವರೆಗೆ ಇವರ ಅಮಾನತ್ತಿನ ಅವಧಿಯನ್ನು ಅಮಾನತ್ತಿನ ಅವಧಿಯೆಂದು ಪರಿಗಣಿಸಿ ವಿಧಿಸಿದ್ದ ದಂಡನೆಯ ಪರಿಗಣಿಸದೆ ಇವರಿಗೆ ವೇತನವನ್ನು ನಿಗದಿಪಡಿಸುವಂತೆ ತೀರ್ಮಾನಿಸಲಾಯಿತು.

| | |
|---|---|
| ವಿಶೇಷ ಸಭೆ 2019/9.2 | ರೂ.20.00 ಲಕ್ಷ ಮಿತಿಗೊಳಪಟ್ಟ ಸರ್ಕಾರಿ ತೋಟಗಾರಿಕಾ ಇಲಾಖೆಯ ಅಂಗಸಂಸ್ಥೆ 'ದಿ ನರ್ಸರಿಮೆನ್ ಕೋ ಆಪರೇಟೀವ್ ಸೊಸೈಟಿ' ಯಿಂದ ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗಕ್ಕೆ ಸೇವೆಗಳನ್ನು ಪಡೆಯುವ ಬಗ್ಗೆ. |
| ತೀರ್ಮಾನ | ಸರ್ಕಾರಿ ತೋಟಗಾರಿಕಾ ಇಲಾಖೆಯ ಅಂಗಸಂಸ್ಥೆಯಾದ 'ದಿ ನರ್ಸರಿಮೆನ್ ಕೋ ಆಪರೇಟೀವ್ ಸೊಸೈಟಿ'ಯ ಸೇವೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕಾ ವಿಭಾಗ ಪಡೆಯಲು ಸಭೆಯು ಅನುಮೋದಿಸಿತು. |
| ವಿಶೇಷ ಸಭೆ 2019/9.3 | Centre For Study of Social Exclusion and Inclusive Policy (CSSEIP) ಕೇಂದ್ರದಲ್ಲಿನ ಬೋಧಕರ ಸೇವೆಯನ್ನು ಮುಂದುವರೆಸುವ ಬಗ್ಗೆ. |
| ತೀರ್ಮಾನ | Centre For Study of Social Exclusion and Inclusive Policy (CSSEIP) ಕೇಂದ್ರದಲ್ಲಿನ ಬೋಧಕರ ಸೇವೆಯನ್ನು ದಿನಾಂಕ 31-3-2020 ರವರೆಗೆ ಮುಂದುವರೆಸಲು ಸಭೆಯು ತೀರ್ಮಾನಿಸಿತು. |
| ವಿಶೇಷ ಸಭೆ 2019/9.4 | ವಿಶ್ವವಿದ್ಯಾನಿಲಯದ 2018-19ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಬಗ್ಗೆ. |
| ತೀರ್ಮಾನ | ಸರ್ಕಾರದಿಂದ ಬಂದ ನಮೂನೆಯಲ್ಲಿ ವಿಶ್ವವಿದ್ಯಾನಿಲಯದ 2018-19ನೇ ಸಾಲಿನ ವಾರ್ಷಿಕ ವರದಿಯನ್ನು ತಯಾರಿಸಿ ಸೆಪ್ಟೆಂಬರ್ ಅಂತ್ಯದೊಳಗೆ ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ಕುಲಪತಿಯವರು ಸಭೆಗೆ ತಿಳಿಸಿದರು.<br>ಸಭೆಯು ಇದನ್ನು ಪರಿಶೀಲಿಸಿ ಅನುಮೋದಿಸಿತು. |
| ವಿಶೇಷ ಸಭೆ 2019/9.5 | ಡಾ. ಯಶವಂತ ಡೋಂಗ್ರೆ, ನಿವೃತ್ತ ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ಸ್ನಾತಕೋತ್ತರ ಕೇಂದ್ರ, ಹಾಸನ ಇವರ ನಿವೃತ್ತಿ ಸಮಯದ ಗಳಿಕೆ ರಜೆ ನಗದೀಕರಣದ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾಲಯವು ಈ ಬಗೆಗೆ ಸಲ್ಲಿಸಿರುವ Statutes ಸರ್ಕಾರದಿಂದ ಅನುಮೋದನೆ ಪಡೆದ ನಂತರ ನಿವೃತ್ತಿ ಸಮಯದ ಗಳಿಕೆ ರಜೆಯನ್ನು ನಗದೀಕರಣಗೊಳಿಸಲು ಸಭೆಯು ತೀರ್ಮಾನಿಸಿತು. ಹಾಗೂ ಕುಲಪತಿಯವರು ಹಣಕಾಸು ಅಧಿಕಾರಿಗಳಿಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸದರಿ ವಿಷಯವನ್ನು ಸಂಪೂರ್ಣ ವಿವರಗಳೊಡನೆ ಮರುಮಂಡಿಸಲು ನಿರ್ದೇಶಿಸಿದರು.<br><br>**ಮುಂದೂಡಲಾಯಿತು.** |

| | |
|---|---|
| ವಿಶೇಷ ಸಭೆ 2019/9.6 | ಡಾ. ವಿ. ವಾಸುದೇವ್, ನಿವೃತ್ತ ಪ್ರಾಧ್ಯಾಪಕರು, ಜೀವ-ವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಹಾಸನ ಇವರ ನಿವೃತ್ತಿ ಸಮಯದ ಗಳಿಕೆ ರಜೆ ನಗದೀಕರಣದ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾಲಯವು ಈ ಬಗೆಗೆ ಸಲ್ಲಿಸಿರುವ Statutes ಸರ್ಕಾರದಿಂದ ಅನುಮೋದನೆ ಪಡೆದ ನಂತರ ನಿವೃತ್ತಿ ಸಮಯದ ಗಳಿಕೆ ರಜೆಯನ್ನು ನಗದೀಕರಣಗೊಳಿಸಲು ಸಭೆಯು ತೀರ್ಮಾನಿಸಿತು. ಹಾಗೂ ಕುಲಪತಿಯವರು ಹಣಕಾಸು ಅಧಿಕಾರಿಗಳಿಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಸದರಿ ವಿಷಯವನ್ನು ಸಂಪೂರ್ಣ ವಿವರಗಳೊಡನೆ ಮರುಮಂಡಿಸಲು ನಿರ್ದೇಶಿಸಿದರು.<br>**ಮುಂದೂಡಲಾಯಿತು.** |

ಇತರೆ ವಿಷಯಗಳು:

- ದಿನಾಂಕ 23-8-2019ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಪ್ರೊ. ಜೆ. ಹೇಮಂತ ಕುಮಾರ್, ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 15-10-2019 ರಿಂದ 20-10-2019ರವರೆಗೆ Indo French Meeting for Higher Education and Research Institutions at Lyon, France ಗೆ ಹೋಗುವ ಅನುಮತಿಯನ್ನು ಹಿಂಪಡೆದು ನವೆಂಬರ್ 2019 ರಲ್ಲಿ Newzealand ನಲ್ಲಿ ನಡೆಯಲಿರುವ <u>**ಸಮ್ಮೇಳನಕ್ಕೆ**</u> ವಿಶ್ವವಿದ್ಯಾನಿಲಯದಿಂದ ಯಾವುದೇ ಆರ್ಥಿಕ ಹೊಣೆಯಿಲ್ಲದೆ ಸ್ವಂತ ಖರ್ಚಿನಲ್ಲಿ ಹೋಗಿ ಬರಲು ಪ್ರೊ. ಹೇಮಂತ್ ಕುಮಾರ್, ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಸಭೆಯು ಅನುಮತಿಸಿತು.
- ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಶೈಕ್ಷಣಿಕ ಹಿತದೃಷ್ಟಿಯಿಂದ Campus wide Wireless Connectivity and RF Connectivity ವ್ಯವಸ್ಥೆಯನ್ನು ಕಲ್ಪಿಸುವ ವಿಷಯವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.
- ಕರ್ನಾಟಕ ರಾಜ್ಯ ಸರ್ಕಾರದ ಅಭಿವೃದ್ಧಿ ಅನುದಾನವನ್ನು ಮೈಸೂರು ವಿಶ್ವವಿದ್ಯಾನಿಲಯದ ಐ.ಸಿ.ಟಿ ಕಾರ್ಯಚಟುವಟಿಕೆಗಳಿಗೆ ವಿನಿಯೋಗಿಸಿಕೊಳ್ಳಲು ಸಭೆಯು ಅನುಮೋದಿಸಿತು.
- ದೂರಶಿಕ್ಷಣದ ಪ್ರವೇಶಾತಿ ವಿಚಾರದಲ್ಲಿ ಪ್ರತ್ಯೇಕವಾದ (BOS) (ಅಧ್ಯಯನ ಮಂಡಳಿಯನ್ನು) ರಚಿಸುವುದಾಗಿ ಕುಲಪತಿಗಳು ಸಭೆಗೆ ತಿಳಿಸಿದರು.
- ದೂರಶಿಕ್ಷಣದ ಬಿ.ಕಾಂ ಕೋರ್ಸಿನಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಉದ್ಯೋಗ ಅವಲಂಬಿತ Additional courses ಗಳನ್ನು ಅಳವಡಿಸಲು BOSಗೆ ಅಧಿಕಾರವನ್ನು ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.

ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿ ಮತ್ತು ಅಧ್ಯಕ್ಷರು